# ವಿ ಡಿ ಐ ಟಿ ಪ್ರಾಧ್ಯಾಪಕರು, ವಿದ್ಯಾರ್ಥಿಗಳ ಸಾಧನೆ

**»ಜನಮಾಧ್ಯಮ, ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಶೈಕ್ಷಣಿಕ ಮತ್ತು ಸಂಶೋಧನ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಅವರ ಸಂಶೋಧನಾ ಪ್ರಬಂಧ 'ವೆಕ್ಟರ್ ಕ್ವಾಂಟೈಸೇಷನ್ ಬೇಸ್ಡ್ ಕಂಪ್ರೆಶನ್ ಯೂಸಿಂಗ್ ಡಿಸಿಟಿ ಆ್ಯಂಡ್ ಎಸ್ ವಿ ಡಿ ಅಲ್ಗೋರಿದಮ್ ಆಫ್ ಡಿಜಿಟಲ್ ಇಮೇಜ್' ಅಂತರಾಷ್ಟ್ರೀಯ ಮಟ್ಟದ ತಾಂತ್ರಿಕ ಪತ್ರಿಕೆ ಸ್ಪ್ರಿಂಜರ್‌ನಲ್ಲಿ ಪ್ರಕಟಗೊಳ್ಳಲು ಆಯ್ಕೆಯಾಗಿದೆ. ಇದೇ ವಿಭಾಗದ 7ನೇ ಸೆಮಿಸ್ಟರ್‌ನ ವಿದ್ಯಾರ್ಥಿನಿ ಸಂಜನಾ ಶಿವಪುರ ಮಠ ಹಾಗೂ ಸಂಜನಾ ಸವದತ್ತಿಗೆ ಅಂತರರಾಷ್ಟ್ರೀಯ ಮಟ್ಟದ ಐ ಇ ಇ ಇ ಸಂಸ್ಥೆಯು 50,000 ಮತ್ತು 10,000 ರೂಪಾಯಿ ವಿದ್ಯಾರ್ಥಿ ವೇತನ ನೀಡಿದೆ. ಇ ಆ್ಯಂಡ್ ಸಿ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಸಿರಿಗೌರಿ ಎಂ. ಹಾಗೂ ತರುಣ್ ಎಸ್. ಗೆ ಎ ಐ ಸಿ ಟಿ ಇ ಯು ಭಾರತ ಸರ್ಕಾರದ ಸಿ- ಡಾಕ್ ತ್ರಿವೇಂದ್ರಂನಲ್ಲಿ ವೇತನಸಹಿತ ಇಂಟರ್ನಶಿಪ್ ಗಾಗಿ ಆಯ್ಕೆ ಗೊಂಡಿದ್ದಾರೆ.

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿ ತೇಜಸ್ ಮೋರೆ ಪ್ರತಿಷ್ಠಿತ ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಇಂಟರ್ನಶಿಪ್ ಸಂಪೂರ್ಣಗೊಳಿಸಿದ್ದಾನೆ. ರಾಮನಗರದ ಬಿಡದಿಯಲ್ಲಿರುವ ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಮೂರು ತಿಂಗಳ ಅವಧಿಯ ಇಂಟರ್ನಶಿಪ್‌ನಲ್ಲಿ ವಾಹನ ತಯಾರಿಕಾ ಪ್ರಕ್ರಿಯೆಯಲ್ಲಿ ಕೆಲವು ನ್ಯೂನತೆಗಳಿಗೆ ಪರಿಹಾರ ಒದಗಿಸುವ ಪ್ರಾಜೆಕ್ಟ್ ಕೈಗೊಂಡು ಕಂಪನಿಯ ಮೆಚ್ಚುಗೆಗೆ ಪಾತ್ರನಾಗಿದ್ದಾನೆ.

ಸಿವಿಲ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಗಿರಿಧರ್ ಹೆಚ್ ಮತ್ತು ಮನೋಜ್ ಎಚ್ ಅರ್ಬೇಸ್ಟ್ರಕ್ಚರ್ ಪ್ರೈ. ಲಿ. ನಲ್ಲಿ ಉದ್ಯೋಗಾವಕಾಶ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ. ರಾಜೇಶ್ವರಿ ಎನ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ಸಂತಸ ವ್ಯಕ್ತಪಡಿಸಿದ್ದಾರೆ. ಮಹಾವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಶೈಕ್ಷಣಿಕ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿರುವುದು ಹರ್ಷ ತಂದಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.